Compt/Uplok/BD/475/2018

# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/475/2018/ಎಆರ್‌ಎಲ್‌ಓ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 10/03/2020.

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (1) ಅನ್ವಯ ವರದಿ***

ವಿಷಯ: ದೊಡ್ಡಬಳ್ಳಾಪುರ ತಾಲ್ಲೂಕು ಪುಟ್ಟಯ್ಯನ ಅಗ್ರಹಾರ ಗ್ರಾಮದ ಸೈಟ್ ನಂ. 11ರ ಪಕ್ಕದಲ್ಲಿರುವ ರಸ್ತೆಯ ಒತ್ತುವರಿಯನ್ನು ತೆರವುಗೊಳಿಸುವ ಕುರಿತು.

****

ಶ್ರೀ. ಎಂ. ಮಂಜುನಾಥ್, ತಂದೆ ಲೇಟ್. ಮುನಿಕೃಷ್ಣಪ್ಪ, ಪುಟ್ಟಯ್ಯನ ಅಗ್ರಹಾರ ಗ್ರಾಮ, ಶ್ಯಾಕಲಾದೇವನಪುರ ಅಂಚೆ, ಮಧುರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದು "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ ಶ್ರೀಮತಿ. ಸಿ. ಗೀತಮಣಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹೊನ್ನಾವರ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ), ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ಪುಟ್ಟಯ್ಯನ ಅಗ್ರಹಾರ ಗ್ರಾಮದ ಸೈಟ್ ನಂ. 11ರಲ್ಲಿ ದೂರುದಾರರ ಮನೆಯಿದ್ದು, ಸದರಿ ಮನೆಯ ಮುಂದೆ 20 ಅಡಿ ರಸ್ತೆಯಿದ್ದು ಸದರಿ ರಸ್ತೆಯನ್ನು ಅತಿಕ್ರಮಿಸಿ ಶ್ರೀ. ಸಲೀಂ ಎನ್ನುವವರು ಮನೆಯ ಮೆಟ್ಟಿಲನ್ನು ಹಾಗೂ ಶ್ರೀ. ಸೈಯದ್ ಮುಸ್ತಫಾ ಎನ್ನುವವರು ಶೌಚಾಲಯವನ್ನು ನಿರ್ಮಿಸಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಲು ಎದುರುದಾರರಿಗೆ ದೂರು ನೀಡಿದ್ದರೂ ಎದುರುದಾರರು ಯಾವುದೇ ಕ್ರಮ ಕೈಗೊಳ್ಳದೆ ಬೇಜವಾಬ್ದಾರಿಯಿಂದ ಹಿಂಬರಹವನ್ನು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಅಕ್ರಮವಾಗಿ ಕಟ್ಟಿರುವ ಮನೆಯ ಮೆಟ್ಟಿಲು ಮತ್ತು ಶೌಚಾಲಯವನ್ನು ತೆರವುಗೊಳಿಸಲು ಕೋರಿರುತ್ತಾರೆ.

3. ಸದರಿ ದೂರಿಗೆ ಸಂಬಂಧಿಸಿದಂತೆ ಎದುರುದಾರರಿಂದ ಆಕ್ಷೇಪಣೆಯನ್ನು ಕರೆಯಲಾಗಿ, ಎದುರುದಾರರು ದಿ. 09/08/2018ರಂದು ಸಲ್ಲಿಸಿದ ಆಕ್ಷೇಪಣೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಒತ್ತುವರಿಯನ್ನು ತೆರವುಗೊಳಿಸುವ) ನಿಯಮಗಳು 2011ರನ್ವಯ, ಒತ್ತುವರಿಯನ್ನು ತೆರವುಗೊಳಿಸುವ ಸಕ್ಷಮ ಪ್ರಾಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿಯಾಗಿರುವುದರಿಂದ ದೂರುದಾರರು ಕೋರಿರುವಂತೆ ಒತ್ತುವರಿಯನ್ನು ತೆರವುಗೊಳಿಸಲು ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

4. ಪ್ರಸ್ತುತ ಪುಟ್ಟಯ್ಯನ ಅಗ್ರಹಾರ ಗ್ರಾಮದ ಕಾಲೋನಿಯಲ್ಲಿ ಕಾಂಕ್ರಿಟ್ ರಸ್ತೆಯು ನಿರ್ಮಾಣವಾಗಿದ್ದು, ಸದರಿ ಕಾಲೋನಿಯ ಶ್ರೀ. ಮಂಜುನಾಥ್‌ರವರ

ಮನೆಯಿಂದ ಮುಖ್ಯ ರಸ್ತೆಯವರಗೆ ಸಿಮೆಂಟ್ ಚರಂಡಿ ಮತ್ತು ಮೋರಿ ನಿರ್ಮಾಣ ಕಾಮಗಾರಿಯನ್ನು ಹೊನ್ನಾವರ ಗ್ರಾಮ ಪಂಚಾಯಿತಿಯ 2017-18ನೇ ಸಾಲಿನ 14ನೇ ಹಣಕಾಸು ಯೋಜನೆಯ 2ನೇ ಹಂತದ ಕ್ರಿಯಾ ಯೋಜನೆಯಲ್ಲಿ ನಿರ್ಮಿಸಲು ರೂ. 99,000/-ಗಳನ್ನು ಮೀಸಲಿಡಿಸಲಾಗಿದೆ ಎಂದು ತಿಳಿಸಿರುತ್ತಾರೆ. ದೂರುದಾರರು ಅರ್ಜಿಯೊಂದಿಗೆ ಡಿ.ಸಿ. ಕನ್ವರ್ಷನ್ ನಿವೇಶನಗಳ ನಕ್ಷೆಯ ಪ್ರತಿಯೆಂದು ಉಲ್ಲೇಖಿಸಿ ಲೇಔಟ್ ಪ್ಲಾನ್‌ನ ಪ್ರತಿಯನ್ನು ಲಗತ್ತಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ, ದಿ. 23/01/2018ರಂದು ದೂರುದಾರರಿಗೆ ಅನುಮೋದಿತ ಡಿ.ಸಿ. ಕನ್ವರ್ಷನ್ ಪ್ರತಿ ಮತ್ತು ಅನುಮೋದಿತ ನಿವೇಶನದ ನಕ್ಷೆಯನ್ನು ನೀಡುವಂತೆ ಪಂಚಾಯಿತಿ ಕಛೇರಿಯಿಂದ ಹಿಂಬರಹವನ್ನು ನೀಡಲಾಗಿರುತ್ತದೆ. ಅರ್ಜಿಯೊಂದಿಗೆ ಲಗತ್ತಿಸಿರುವ ನಕ್ಷೆಯ ಪ್ರತಿಯು ಅನುಮೋದಿತ ಎಂದು ಗೋಚರಿಸುವುದಿಲ್ಲ ಹಾಗೂ ಡಿ.ಸಿ. ಕನ್ವರ್ಷನ್ ಪ್ರತಿಯನ್ನು ಲಗತ್ತಿಸಿರುವುದಿಲ್ಲ. ಗ್ರಾಮ ಪಂಚಾಯಿತಿ ಕಛೇರಿಯಿಂದ ದೂರುದಾರರಿಗೆ ಅನುಮೋದಿತ ಡಿ.ಸಿ. ಕನ್ವರ್ಷನ್ ಮತ್ತು ಅನುಮೋದಿತ ನಿವೇಶನದ ನಕ್ಷೆಯನ್ನು ನೀಡುವಂತೆ ಹಿಂಬರಹ ನೀಡಿದ ನಂತರವು ದೂರುದಾರರು ಸದರಿ ದಾಖಲೆಗಳನ್ನು ಒದಗಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

5. ದಿನಾಂಕ 18/01/2018ರಂದು ದೂರುದಾರರು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿ ದೊಡ್ಡಬಳ್ಳಾಪುರರವರಿಗೆ ಅರ್ಜಿ ಸಲ್ಲಿಸಿ ದೂರಿಗೆ ಸಂಬಂಧಿಸಿದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ದಿನಾಂಕ 03/02/2018ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರರವರು ಜ್ಞಾಪನವನ್ನು ಹೊರಡಿಸಿ ಈ ಬಗ್ಗೆ ಕೂಲಂಕುಷವಾಗಿ

ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ. ದಿ. 17/02/2018ರಂದು ಜ್ಞಾಪನದನ್ವಯ ಸ್ಥಳ ಪರಿಶೀಲನೆ ನಡೆಸಲಾಗಿ ದೂರುದಾರರ ಮನೆಯಿಂದ ಶ್ರೀ. ಹುಚ್ಚಣ್ಣನವರ ಮನೆಯವರೆಗೆ ರಸ್ತೆಯು ಒಂದೇ ರೀತಿಯಿದ್ದು ಎಲ್ಲಿಯೂ ಕಿರಿಯದಾಗಲೀ, ಅಂಕುಡೊಂಕಾಗಲೀ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸ್ಥಳಪರಿಶೀಲನೆ ಕೈಗೊಳ್ಳುವ ಮುನ್ನವೇ ಸದರಿ ರಸ್ತೆಗೆ ಕಾಂಕ್ರಿಟ್ ಹಾಕಿದ್ದು, ಕಾಂಕ್ರಿಟ್ ರಸ್ತೆಯನ್ನು ಗ್ರಾಮಸ್ಥರ ಸಮ್ಮುಖದಲ್ಲಿ ಅಳತೆ ಮಾಡಿದ್ದು, ರಸ್ತೆಯ ಅಗಲವು 16.5 ಅಡಿ ಇರುತ್ತದೆ ಎಂದು ತಿಳಿಸಿರುತ್ತಾರೆ. ಅನುಮೋದಿತ ನಕ್ಷೆ ಇಲ್ಲದ ಕಾರಣ ರಸ್ತೆಯು ಒತ್ತುವರಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ದೂರುದಾರರು ಎದುರುದಾರರ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆ ಮತ್ತು ಸಾರ್ವಜನಿಕರಿಗೆ ಸದರಿ ರಸ್ತೆಯಲ್ಲಿ ಓಡಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ ಕಾರಣ ದೂರುದಾರರು ನೀಡಿರುವ ದೂರನ್ನು ವಜಾ ಗೊಳಿಸುವಂತೆ ಎದುರುದಾರರು ಕೋರಿರುತ್ತಾರೆ.

6. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳಿಗೆ ದಿನಾಂಕ 12/10/2018ರಂದು ದೂರುದಾರರು ತನ್ನ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ 1993 ಕಲಂ 72(2)ರಲ್ಲಿ ಹೇಳಿರುವಂತೆ, ಅನಧಿಕೃತ ಅಡೆತಡೆ, ಒತ್ತುವರಿಗಳನ್ನು ತೆರವುಮಾಡುವ ಅಧಿಕಾರ ಗ್ರಾಮ ಪಂಚಾಯಿತಿಯು ಹೊಂದಿರುತ್ತದೆ. ಆದರೆ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಯಾವುದೇ ಕಾನೂನು ಕ್ರಮ ಪಾಲನೆ ಮಾಡದೇ ಪ್ರಾಧಿಕಾರದ ದಾರಿ ತಪ್ಪಿಸುವ ಕೆಲಸ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಎದುರುದಾರರು ಸ್ಥಳ ಪರಿಶೀಲನೆ ಮಾಡುವ ಮುಂಚೆ

ದೂರುದಾರರಿಗೆ ಯಾವುದೇ ತಿಳುವಳಿಕೆಯ ಸೂಚನೆ ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಎದುರುದಾರರು ಸಲ್ಲಿಸಿರುವ ವರದಿಯು ನೈಜತೆಯಿಂದ ಕೂಡಿರುವುದಿಲ್ಲ ಹಾಗೂ ಎದುರುದಾರರು ಸಲ್ಲಿಸಿರುವ ಛಾವಚಿತ್ರಗಳು ಒತ್ತುವರಿ ಜಾಗವನ್ನು ಬಿಟ್ಟು ಬೇರೆ ಜಾಗಕ್ಕೆ ಸಂಬಂಧಿಸಿರುವ ಛಾವಚಿತ್ರವಾಗಿರುತ್ತದೆ ಎಂದು ದೂರುದಾರರು ತಿಳಿಸಿರುತ್ತಾರೆ. ಎದುರುದಾರರು ಯಾವುದೇ ಕ್ರಮ ಕೈಗೊಳ್ಳದೇ ಯಾರೂ ಸಹ ಒತ್ತುವರಿ ಮಾಡಿರುವುದಿಲ್ಲ ಎಂದು ಸುಳ್ಳು ವರದಿ ನೀಡುವುದರ ಮೂಲಕ ಚರಂಡಿ ಮಾಡಲು ಅಡ್ಡಲಾಗಿರುವ ಒತ್ತುವರಿಯನ್ನು ತೆರವುಗೊಳಿಸದೆ ಒತ್ತುವರಿದಾರರಿಗೆ ಸಹಕಾರ ನೀಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಆದುದರಿಂದ ಸೂಕ್ತ ಕ್ರಮ ಕೈಗೊಳ್ಳಲು ಪ್ರಾರ್ಥಿಸಿರುತ್ತಾರೆ.

7. ದೂರಿನಲ್ಲಿರುವ ಆಪಾದನೆಗಳನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ಈ ಕೆಳಗೆ ಹೇಳಿದ ಅಂಶಗಳು ಮೇಲ್ನೋಟಕ್ಕೆ ಕಂಡು ಬರುತ್ತವೆ:-

i. ಈ ಪ್ರಕರಣದಲ್ಲಿ ರಸ್ತೆಯ ಅಗಲವು ಎಷ್ಟು ಇರುತ್ತದೆ ಎಂಬ ಬಗ್ಗೆ ದಾಖಲೆಯನ್ನು ದೂರುದಾರರಾಗಲೀ, ಎದುರುದಾರರಾಗಲೀ ಹಾಜರು ಮಾಡಿರುವುದಿಲ್ಲ. ಎದುರುದಾರರು ದಿ. 19/01/2019ರಂದು ಪತ್ರ ಬರೆದು ಸದರಿ ಪತ್ರದಲ್ಲಿ ದೂರುದಾರರು ಈ ಹಿಂದೆ ಮೂಲ ದೂರಿನ ಅರ್ಜಿಯೊಂದಿಗೆ ಲಗತ್ತಿಸಿದ ಬಡಾವಣೆ ನಕ್ಷೆಯ ನಕಲು ಪ್ರತಿಯ ನೈಜತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ 1989ನೇ ಇಸವಿಯಲ್ಲಿ ಪುಟ್ಟಯ್ಯನ ಅಗ್ರಹಾರ ಗ್ರಾಮವು ಕನಸವಾಡಿ ಮಂಡಲಪಂಚಾಯಿತಿ ವ್ಯಾಪ್ತಿಯಲ್ಲಿದ್ದುದರಿಂದ ಪುಟ್ಟಯ್ಯನ ಅಗ್ರಹಾರ ಗ್ರಾಮದ ಸರ್ವೆ ನಂ.

38/1ರಲ್ಲಿ ಡಿ.ಸಿ. ಪರಿವರ್ತಿತ ನಿವೇಶನಗಳ ಬಡಾವಣೆ ನಕ್ಷೆಯ ಅಸಲು ಪ್ರತಿಯು ಲಭ್ಯವಿದ್ದಲ್ಲಿ ಅದರ ಯಥಾ ನಕಲನ್ನು ದೃಢೀಕರಿಸಿ ಒದಗಿಸುವಂತೆ ಕೋರಿ ಕನಸವಾಡಿ ಗ್ರಾಮ ಪಂಚಾಯಿತಿ ಕಛೇರಿಗೆ ಪತ್ರ ಬರೆದಿದ್ದು, ಸದರಿ ಬಡಾವಣೆ ನಕ್ಷೆಯು ತಮ್ಮ ಕಛೇರಿಯಲ್ಲಿ ಲಭ್ಯವಿರುವುದಿಲ್ಲ ಎಂದು ತಿಳಿಸಿ ಕನಸವಾಡಿ ಗ್ರಾಮ ಪಂಚಾಯಿತಿ ಕಛೇರಿಯವರು ಹಿಂಬರಹ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ii. ಎದುರುದಾರರು, ಆಪಾದನೆಗೆ ಸಂಬಂಧಿಸಿದಂತೆ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ದೂರುದಾರರ ಮನೆಯ ಮುಂದೆ ರಸ್ತೆಯನ್ನು ಅಳತೆ ಮಾಡಿದ್ದು, ರಸ್ತೆಯ ಅಗಲವು 16½ ಅಡಿ ರಸ್ತೆ ಇರುತ್ತದೆ ಎಂದೂ, ದೂರುದಾರರು ತಿಳಿಸಿರುವಂತೆ 20 ಅಡಿಗಳಷ್ಟು ಅಗಲವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ರಸ್ತೆಯ ಅಗಲವು 20 ಅಡಿಗಳಿವೆ ಎಂದು ಸಮರ್ಥಿಸಲು ಯಾವುದಾದರೂ ಮೂಲ ದಾಖಲೆಗಳನ್ನು ಒದಗಿಸಬೇಕೆಂದು ದೂರುದಾರರಿಗೆ ತಿಳಿಸಿದ್ದರೂ, ದೂರುದಾರರು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಇದರಿಂದ ದೂರುದಾರರು ಮನೆಯ ಮುಂದೆ 20 ಅಡಿ ಅಗಲ ರಸ್ತೆಯಿದೆ ಎಂದು ಪ್ರತಿಪಾದಿಸಿರುವುದು ಸತ್ಯಕ್ಕೆ ದೂರವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ರಸ್ತೆಯಲ್ಲಿ ಸಾರ್ವಜನಿಕರಿಗೆ ಓಡಾಡಲು ಯಾವುದೇ ಅನಾನುಕೂಲ ಇಲ್ಲವೆಂದು ತಿಳಿಸಿರುತ್ತಾರೆ.

iii. ಈ ಪ್ರಕರಣದಲ್ಲಿ ದೂರುದಾರರು ಹಾಜರು ಮಾಡಿರುವ ಛಾಯಾಚಿತ್ರವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಸದರಿ ಮನೆಯ

ಮೆಟ್ಟಿಲು ಮತ್ತು ಶೌಚಾಲಯ ರಸ್ತೆಯ ಭಾಗವನ್ನು ಅತಿಕ್ರಮಿಸಿಕೊಂಡು ಕಟ್ಟಿರುವುದು ಕಂಡುಬರುತ್ತದೆ. ಸದರಿ ರಸ್ತೆಯು ಪ್ರಸ್ತುತ ಕಾಕ್ರಿಂಟ್ ರಸ್ತೆಯಾಗಿ ನಿರ್ಮಾಣವಾಗಿದ್ದು ಕಂಡುಬಂದಿರುತ್ತದೆ. ಸದರಿ ರಸ್ತೆಯು ಪಂಚಾಯತ್ ಮಿತಿಯಲ್ಲಿ ಇದ್ದರೂ ಕೂಡು ಎದುರುದಾರರು ಸದರಿ ರಸ್ತೆಗೆ ಸಂಬಂಧಪಟ್ಟ ದಾಖಲೆಗಳನ್ನು ಈ ಕಛೇರಿಗೆ ನೀಡಲು ವಿಫಲರಾಗಿರುತ್ತಾರೆ. ಮೇಲಾಗಿ ಸದರಿ ರಸ್ತೆಗೆ ಸಂಬಂಧಪಟ್ಟ ಯಾವುದೇ ದಾಖಲೆಯು ಸದರಿ ಪಂಚಾಯಿತಿಯಲ್ಲಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಇದನ್ನು ಗಮನಿಸಿದಾಗ ಎದುರುದಾರರು ಅನಧಿಕೃತವಾಗಿ ರಸ್ತೆಯನ್ನು ಅತಿಕ್ರಮಿಸಿ ನಿರ್ಮಾಣಮಾಡಿರುವ ಮೆಟ್ಟಿಲು ಹಾಗೂ ಶೌಚಾಲಯವನ್ನು ನಿರ್ಮಿಸಿರುವ ವ್ಯಕ್ತಿಗಳಿಗೆ ಪರೋಕ್ಷವಾಗಿ ಸಹಾಯ ಮಾಡುತ್ತಿರುವುದು ಕಂಡುಬರುತ್ತದೆ.

iv. ಕರ್ನಾಟಕ ಪಂಚಾಯತ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 72(1)(ಎ)ರಂತೆ ಪಂಚಾಯತ್ ಪ್ರದೇಶದ ಪರಿಮಿತಿಯೊಳಗೆ ಯಾವುದೇ ಗೋಡೆ, ಕಂಬಿ, ಬೇಲಿ, ಕಂಬ, ಅಂಗಡಿ, ವರಾಂಡ, ವೇದಿಕೆ, ಮೇಲ್ಛಾಯ, ಮೆಟ್ಟಿಲು ಅಥವಾ ಯಾವುದೇ ಮುಂಚಾಚಿರುವ ರಚನೆ ಅಥವಾ ಇತರ ಒತ್ತುವರಿ ಅಥವಾ ಅಡತಡೆಯನ್ನು ಕಟ್ಟಿದ್ದರೆ ಅಥವಾ ಸ್ಥಾಪಿಸಿದ್ದರೆ ಗ್ರಾಮ ಪಂಚಾಯಿತಿಯು ಅಂತಹ ಅಡೆತಡೆ ಅಥವಾ ಒತ್ತುವರಿಯನ್ನು ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಸದರಿ ರಸ್ತೆಯ ಬದಿ ಸಿಮೆಂಟ್ ಚರಂಡಿ ಮತ್ತು ಮೋರಿ ನಿರ್ಮಾಣ ಕಾಮಗಾರಿಗಾಗಿ ಹೊನ್ನಾವರ ಗ್ರಾಮ ಪಂಚಾಯಿತಿಯ 2017-18ನೇ

ಸಾಲಿನ ಹಣಕಾಸು ಯೋಜನೆಯಲ್ಲಿ ರೂ. 99,000/- ಗಳನ್ನು ಮೀಸಲಿರಿಸಿದೆ ಎಂದು ತಿಳಿಸಿರುತ್ತಾರೆ. ಆದರೆ ಸದರಿ ರಸ್ತೆಯ ಬದಿ ನಿರ್ಮಾಣ ಮಾಡಿರುವ ಮನೆಯ ಮೆಟ್ಟಿಲು ಮತ್ತು ಶೌಚಾಲಯವನ್ನು ತೆರವುಮಾಡದೆ ಸದರಿ ಚರಂಡಿ ನಿರ್ಮಾಣ ಮಾಡಲು ಸಾಧ್ಯವಿರುವುದಿಲ್ಲ ಎಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

v. ಈ ಪ್ರಕರಣದಲ್ಲಿ ಹೇಳಿರುವ ಮನೆಯ ಮೆಟ್ಟಿಲು ಮತ್ತು ಶೌಚಾಲಯವು ರಸ್ತೆಯ ಭಾಗವನ್ನು ಅತಿಕ್ರಮಿಸಿದ್ದರೂ ಎದುರುದಾರರು ಅತಿಕ್ರಮಣವಾಗಿರುವುದಿಲ್ಲ ಎಂದು ವರದಿ ನೀಡಿರುವುದು, ಎದುರುದಾರರ ಕರ್ತವ್ಯಲೋಪವನ್ನು ಎತ್ತಿ ತೋರಿಸುತ್ತದೆ. ಎದುರುದಾರರು ಉದ್ದೇಶಪೂರ್ವಕವಾಗಿಯೇ ಸದರಿ ರಸ್ತೆಗೆ ಸಂಬಂಧಪಟ್ಟ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಒತ್ತುವರಿ ತೆರವುಗೊಳಿಸುವುದು ಕಾರ್ಯನಿರ್ವಾಹಕ ಅಧಿಕಾರಿಯ ವ್ಯಾಪ್ತಿಗೆ ಬರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ದೂರುದಾರರು ಎದುರುದಾರರಿಗೆ ರಸ್ತೆ ಒತ್ತುವರಿಯಾದ ಬಗ್ಗೆ ದೂರು ನೀಡಿದ್ದರೂ ಸಹ ಸದರಿ ಒತ್ತುವರಿಯನ್ನು ತೆರವುಗೊಳಿಸದೆ ಅಥವಾ ಕಾರ್ಯನಿರ್ವಾಹಣಾ ಅಧಿಕಾರಿಯ ಗಮನಕ್ಕೆ ತಂದು ಸದರಿ ಒತ್ತುವರಿಯನ್ನು ತೆರವುಗೊಳಿಸಲು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

vi. ದಿನಾಂಕ 17/08/2013ರ ಕರ್ನಾಟಕ ಸರ್ಕಾರದ ಸುತ್ತೋಲೆಯ ಪ್ರಕಾರ ಗ್ರಾಮ ಪಂಚಾಯಿತಿಯ ಯಾವುದೇ ಆಸ್ತಿಯ ಮೇಲೆ ಯಾವುದೇ

ವ್ಯಕ್ತಿಯು ಒತ್ತುವರಿ ಮಾಡಿರುವ ಮಾಹಿತಿ ಯಾವುದೇ ಮೂಲದಿಂದ ಲಭ್ಯವಾದ ಕೂಡಲೇ ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ನಿರ್ದಿಷ್ಠ ಮಾಹಿತಿಗಳೊಂದಿಗೆ ಸಕ್ಷಮ ಪ್ರಾಧಿಕಾರಿಗೆ (ಕಾರ್ಯನಿರ್ವಾಹಕ ಅಧಿಕಾರಿ) ಅಗತ್ಯ ಕ್ರಮಕ್ಕಾಗಿ 15 ದಿವಸಗೊಳಗಾಗಿ ವರದಿ ಸಲ್ಲಿಸಲು ತಿಳಿಸಿರುತ್ತದೆ. ಆದರೆ ಈ ಪ್ರಕರಣದಲ್ಲಿ ಎದುರುದಾರರಿಗೆ ದೂರುದಾರರು ಸದರಿ ಒತ್ತುವರಿಯನ್ನು ತೆರವುಗೊಳಿಸುವಂತೆ ದೂರು ಸಲ್ಲಿಸಿದ್ದರೂ ಸಹ ಸಕ್ಷಮ ಪ್ರಾಧಿಕಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ 15 ದಿನದೊಳಗೆ ವರದಿ ಸಲ್ಲಿಸದೆ ಕರ್ತವ್ಯ ಲೋಪ ಎಸಗಿರುತ್ತಾರೆ. ಆದರೆ ದಿನಾಂಕ 03/02/2018ರಂದು ಕಾರ್ಯನಿರ್ವಾಹಕ ಅಧಿಕಾರಿರವರೇ ಜ್ಞಾಪನ ಸಲ್ಲಿಸಿ ಎದುರುದಾರರಿಗೆ ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸೂಚಿಸಿದ್ದರೂ ಎದುರುದಾರರು ಸ್ಥಳ ಪರಿಶೀಲನೆ ಮಾಡಿ ರಸ್ತೆಯ ಒತ್ತುವರಿಯನ್ನು ಮರೆಮಾಚಿ ಸದರಿ ರಸ್ತೆಯಲ್ಲಿ ಸಾರ್ವಜನಿಕರಿಗೆ ಓಡಾಡಲು ಯಾವುದೇ ಅನಾನುಕೂಲವಿರುವುದಿಲ್ಲ ಎಂದು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ರಸ್ತೆಯ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿರುವುದರಿಂದ ಚರಂಡಿ ನಿರ್ಮಾಣಕ್ಕೆ ಅಡೆತಡೆಯುಂಟಾಗುವ ಸಾಧ್ಯತೆಯಿರುತ್ತದೆ. ಸದರಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ವಹಿಸುವುದು ಎದುರುದಾರರ ಆಧ್ಯ ಕರ್ತವ್ಯವಾಗಿರುತ್ತದೆ.

6. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು

ಪುಟ್ಟಯ್ಯನ ಅಗ್ರಹಾರ ಗ್ರಾಮದ ಸೈಟ್ ನಂ. 11ರಲ್ಲಿ ದೂರುದಾರರ ಮನೆಯ ಮುಂದೆ ಇರುವ ರಸ್ತೆಯನ್ನು ಅನಧಿಕೃತವಾಗಿ ಅತಿಕ್ರಮಿಸಿ ಶ್ರೀ. ಸಲೀಂ ಎನ್ನುವವರು ಮನೆಯ ಮೆಟ್ಟಿಲನ್ನು ಹಾಗೂ ಶ್ರೀ. ಸೈಯದ್ ಮುಸ್ತಫಾ ಎನ್ನುವವರು ನಿರ್ಮಿಸಿರುವ ಶೌಚಾಲಯವನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಒತ್ತುವರಿ ತೆರವು ಮಾಡುವ ಮೊದಲು ಒತ್ತುವರಿದಾರರಿಗೆ ತಮ್ಮ ವಿವರಣೆಯನ್ನು ಸಲ್ಲಿಸಲು ಅವಕಾಶಕೊಟ್ಟು, ನಂತರ ಕಾನೂನಿನ ಪ್ರಕಾರ ಒತ್ತುವರಿ ತೆರವು ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

11-3-20

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–2,
10.3.2020 ಕರ್ನಾಟಕ ರಾಜ್ಯ.